# ಅಧ್ಯಾಯ 11

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ: ತನುವಿನೊಳಭಿಮಾನವನು ನಿಲ್ಲಿಸಿದೆ ಸಿದ್ಧಾರೂಢರು
ಮನದೊಳಾತ್ಮ ಧ್ಯಾನಮಾಡುತ ಕ್ಲೇಶಗಳ ಸಹಿಸುತಿಹನು
ಜನರೊಳಗೆ ನಿಜಜ್ಞಾನವನು ವರ್ತನದಿ ಪ್ರಕಟಿಸುತ್ತಿರುವನು
ಮನುಜನಿಂಥಾ ಜ್ಞಾನಿಯನು ತಿಳಿದಾಗಲವನೇ ಧನ್ಯನು..

ಯಾವಾತನ ವರ್ತನವೇ ಲೋಕಕ್ಕೆ ಬೋಧವಾಗಿರುತ್ತದೆ,
ಮತ್ತು ಯಾವನನ್ನು ಅನುಸರಿಸುವುದರಿಂದ ಬಂಧಗಳೆಲ್ಲಾ
ತಾವೇ ಹರಿದು ಹೋಗುತ್ತವೆ, ಅಂಥಾ ಸಿದ್ಧಾರೂಢ
ಗುರುವರನು ಸರ್ವರಿಗೂ ಸುಖದನಾಗಿ ಈ ಧರಣಿಯ ಮೇಲೆ
ಸಂಚರಿಸುತ್ತಿರುವನು, ದುಷ್ಟ ಜನರು ಶರೀರವನ್ನು
ಪೀಡಿಸುತ್ತಿರುವಾಗ, ಅಂಥವರ ಕೂಡ ಶಾಂತತ್ವದಿಂದ
ವರ್ತಿಸುತ್ತಿದ್ದು, ಈ ದೇಹ ದುಃಖವು ಅದು ಮನಸ್ಸಿಗೆ
ಸುಖವಾಗುವದೋ ಎಂಬಂತೆ ಲೋಕಕ್ಕೆ ತೋರಿಸುತ್ತಿರುವನು.
ಆ ಸದ್ಗುರುರುರಾಯನೇ,ಜನರಿಗೆ ಭವನದಿಯನ್ನು ದಾಟಲಿಕ್ಕೆ
ಉತ್ತಮವಾದ ಉಪಾಯವನ್ನು ಯೋಚಿಸುತ್ತಿರುವನು. ಹಿಂದಿನ
ಅಧ್ಯಾಯದಲ್ಲಿ ಸಿದ್ಧ ಸದ್ಗುರುಗಳು, ವಿಜಾಪುರದಲ್ಲಿರುವಾಗ
ವಿಜನ ಸ್ಥಾನದಲ್ಲಿದ್ದು ತೋರಿಸಿದ ಅವಸ್ಥೆಯನ್ನು ಕಂಡು ಲೌಕಿಕ
ಜನರಿಗೆ ಬಹು ಆಶ್ಚರ್ಯವಾಗುತ್ತಿತ್ತು, ಎಂಬುದು ವಿವರಿಸಿತು.
ಕೆಲವು ದಿವಸಗಳಾದ ಮೇಲೆ ಮೊಹರಮ ಹಬ್ಬ ವು ಬರಲು,
ಕೆಲವು ತುಂಟರು ಕೂಡಿ, ಸಿದ್ಧನಾಥರನ್ನು ಹಿಡಿದು ಒಂದು
ನಗದ ಮೇಲೆ ಕೂಡ್ರಿಸಿ, ಅದನ್ನು ಎತ್ತಿ ಹೆಗಲ ಮೇಲೆ

ಹೊತ್ತುಕೊಂಡು ಮನೆ ಮನೆಗೆ ಹೋಗಿ ಹಣ ಬೇಡಿಕೊಳ್ಳುತ್ತಿದ್ದರು. ಇಡೀ ದಿವಸ ಈ ಪ್ರಕಾರ ಮಾಡುತ್ತಾ ಬಹಳ ಹಣ ಕೊಡಿಸಿದರು. ಆದರೆ ಸಿದ್ದರು ಒಂದು ಕ್ಷಣಹೊತ್ತು ನಗದ ಮೇಲಿಂದ ಇಳಿದ ಕೂಡಲೇ ಆ ದುಷ್ಟರು ಅವರನ್ನು ಹೊಡೆಯುತ್ತಿದ್ದರು. ಅದನ್ನೆಲ್ಲ ಸಹಿಸಿಕೊಂಡು, ನಗದ ಮೇಲೆಯೇ ಕೂತಿರುವದರಿಂದ ಮಹಾತ್ಮರ ತೊಡೆಗಳು ಕೆತ್ತಿ, ಬಾತು ನಡಿಯಲಿಕ್ಕೆ ಬಾರದಂತಾಯಿತು. ಇಷ್ಟು ಮಾಡಿ ಆ ನಿರ್ದಯರಾದಂಥವರು ತಮ್ಮ ಕೆಲಸವಾದ ಬಳಿಕ ಸಿದ್ಧಾರೂಢರನ್ನು ಬಿಟ್ಟುಕೊಟ್ಟು ಹೋಗಿಬಿಟ್ಟರು. ಸಹನಶೀಲರಾದ ಮಹನೀಯರಿಗೆ ಕಾಲುಗಳಿಗೆ ಆದ ದುಃಖದಿಂದ ನಡಿಯಲಿಕ್ಕೆ ಬಾರದೆ, ಮೆಲ್ಲಮೆಲ್ಲನೆ ಒಂದು ಮಸೀದಿಯಲ್ಲಿ ಬಂದು ಬಿದ್ದುಕೊಂಡು ಅನ್ನುತ್ತಾರೆ - "ಈಶ್ವರನು ಇದೊಂದು ಉಪಕಾರವನ್ನೇ ಮಾಡಿದನು. ಯಾಕೆಂದರೆ, ದೇಹ ಚಲಿಸುತ್ತಿರುವದರಿಂದ ಮನಸ್ಸಿಗೆ ವಿಕ್ಷೇಪವಾಗುತ್ತಿತ್ತು. ಆದರೆ ಒಂದೇ ಜಾಗದಲ್ಲಿರುವದರಿಂದ ನಿರ್ವಿಕಲ್ಪ ಸ್ಥಿತಿಗೆ ಅನುಕೂಲವಾಗುತ್ತದೆ', ಈ ಪ್ರಕಾರ ಕೆಲವು ದಿನಗಳು

ಹೋದವು. ಮಹಾತ್ಮರಿಗೆ ಅನ್ನೋದಕವನ್ನು ದೇವರು ಅಲ್ಲೇ ಪೂರೈಸುತ್ತಿದ್ದರು. ಸಿದ್ದರಿದ್ದಲ್ಲಿಗೆ ಹುಡುಗರು ಬರುತ್ತಿದ್ದು, ಅವರ ಕೂಡೆ ಸದ್ಗುರುಗಳು ಆಡುತ್ತ ಹೊತ್ತು ಕಳೆಯುತ್ತಿದ್ದರು. ಚೆಂಡು, ಬೊಗರಿ, ಗಾಳಿಪಟ ಇತ್ಯಾದಿ ಆಟಗಳನ್ನು ಹುಡುಗರ ಕೂಡ ಸಿದ್ಧನಾಥರು ಆಡುತ್ತಿರುವಾಗ, ಅವರೆಲ್ಲರು ಸಿದ್ದರ ಮೇಲೆ ಬಹು ಪ್ರೇಮ ಮಾಡುತ್ತಿದ್ದರು. ಮಹಾತ್ಮರ ಭಾಷಣದಿಂದ ಅವರಿಗೆ ಬಹಳೇ ಆನಂದವಾಗುತ್ತಿತ್ತು, ಅವಧೂತರ ಈ ವಾರ್ತೆಯನ್ನು ಕೇಳಿ, ತುಳಜಪ್ಪನೆಂಬ ಭಕ್ತನು, ಅವರಿದ್ದಲ್ಲಿಗೆ ಬಂದು, ನಮಸ್ಕರಿಸಿ, ನಿಂತುಕೊಂಡನು. ಕಣ್ಣುತುಂಬ ಆ ಮಹಾಪುರುಷನ ಮುಖವನ್ನು ನೋಡಿ, ತುಳಜಪ್ಪನಿಗೆ ಬಹು ಆನಂದವಾಗಿ ಅಂದುಕೊಳ್ಳುತ್ತಾನೆ - ಈ ಮಹಾತ್ಮನ ಸೇವಾ ನನಗೆ ಸಿಕ್ಕಿದರೆ ನಾನು ಧನ್ಯನಾಗುವೆನು. ಅನಂತರ ಆ ಸದ್ಭಕ್ತನು ಕೆಲವು ಹುಡುಗರನ್ನು ಕರೆಯಿಸಿ, ಅವರನ್ನು ಕುರಿತು ಹೇಳಿದ್ದೇನೆಂದರೆ, “ನೀವು ಆಟವಾಡುತ್ತಾ ಈ ಸಿದ್ದರನ್ನು ನಮ್ಮ ಮನೆಗೆ ಕರಕೊಂಡು ಬಂದರೆ, ನಿಮಗೆ ಕಡ್ಲಿ ಬೆಲ್ಲವನ್ನು ಕೊಡುವೆನು'. ಇದನ್ನು ಕೇಳಿ ಹತ್ತಿಪ್ಪತ್ತು ಹುಡುಗರು ಕೂಡಿ

ಸಿದ್ಧರ ಕೂಡಾ ಚೆಂಡಿನ ಆಟವಾಡುತ್ತಾ ತುಳಜಪ್ಪನ ಮನೆ ಕಡಿಗೆ ಹೋದರು. ತುಳಜಪ್ಪನ ಮನೆ ಮುಂದೆ ಮಹತ್ಮರು ಬಂದ ಕೂಡಲೇ ಆತನು ಬಂದು ಇವರ ಕೈಹಿಡಿದು, ಮನೆಯೊಳಗೆ ಕರಕೊಂಡು ಹೋಗಿ, ಮಂಚದ ಮೇಲೆ ಕುಳ್ಳಿರಿಸಿದನು. ಅನಂತರ ತುಳಜಪ್ಪನು ಹುಡುಗರಿಗೆಲ್ಲ ಕಡ್ಲಿ ಪುಟಾಣಿ ಕೊಟ್ಟ ಕಳುಹಿಸಿದನು. ಬಳಿಕ ಆ ಸದ್ಭಕ್ತನು ಓಣಿಯೊಳಗಿನ ಗೃಹಸ್ಥರನ್ನೆಲ್ಲಾ ಕರೆದುಕೊಂಡು ಬಂದು, ಸಿದ್ಧಾರೂಢರನ್ನು ಹೊರಗೆ ಕರೆದುಕೊಂಡು ಹೋಗಿ ಕ್ಷೌರ ಸ್ನಾನಾದಿಗಳನ್ನು ಮಾಡಿಸಿದನು. ಆ ಮೇಲೆ ದಿವ್ಯ ಪೀಠದ ಮೇಲೆ ಕೂಡ್ರಿಸಿ ಯಥಾಯೋಗ್ಯ ಪೂಜಾದಿಗಳನ್ನು ಮಾಡಿ ಪಂಚಪಕ್ಷಾನ್ನವನ್ನು ಭೋಜನ ಮಾಡಿಸಿದನು. ಭೋಜನಾನಂತರ ಮೃದು ಶಯ್ಯೆಯ ಮೇಲೆ ಸದ್ಗುರುಗಳನ್ನು ಮಲಗಿಸಿದರು. ನಿತ್ಯದಲ್ಲಿಯೂ ಸದ್ಭಕ್ತರು ಬರುತ್ತಿದ್ದು, ಸಿದ್ಧರ ಕೂಡ ವೇದಾಂತ ವಿಚಾರವನ್ನು ಚರ್ಚೆ ಮಾಡುತ್ತ ತಮ್ಮ ಶಂಕೆಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ಸಿದ್ಧರು ಬ್ರಹ್ಮಜ್ಞಾನಿಗಳೆಂಬ ವಾರ್ತೆಯು ಶಹರದೊಳಗೆಲ್ಲ

ಪಸರಿಸಿಕೊಂಡಿತು, ಮತ್ತು ನಾಲ್ಕು ಕಡೆಗಳಿಂದ ಜಿಜ್ಞಾಸುಗಳು ಮಹಾತ್ಮರ ಭಾಷಣವನ್ನು ಶ್ರವಣ ಮಾಡಲಿಕ್ಕೆ ಬರಹತ್ತಿದರು. ಆಗ ಸಿದ್ಧರು ತುಳಜಪ್ಪನನ್ನು ಕುರಿತು ಅನ್ನುತ್ತಾರೆ-" ಹಾರಾಡುತ್ತಿದ್ದ ಪಕ್ಷಿಯನ್ನು ಗೂಡಿನೊಳಗೆ ಬಂಧನ ಮಾಡಿದಂತೆ ನೀನು ನನ್ನನ್ನು ಇಲ್ಲಿ ಇಟ್ಟುಕೊಂಡಿರುವಿ. ನನ್ನ ಮನಸ್ಸಿಗೆ ಇಲ್ಲಿ ಸುಖವಾಗುವದಿಲ್ಲ. ನನ್ನನ್ನು ಅದೇ ಮಸೀದಿಯೊಳಗೆ ಬಿಟ್ಟು ಬಿಡು", ಆಗ ತುಳಜಪ್ಪನು ಅದೇ ಪ್ರಕಾರ ಮಾಡಿದನು. ಸಿದ್ಧರಿರುವ ಸ್ಥಳವನ್ನು ಕೇಳಿಕೊಂಡು ಸರ್ವರು ಬರತೊಡಗಿದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ವಕೀಲ, ಫೌಜದಾರ, ಮಾಮಲೇದಾರ ಇವರು ಸಹ ಮಹಾತ್ಮ ದರ್ಶನಕ್ಕೆ ಬಂದು ಬಹಳ ಪಾಶ್ಚಾತ್ಯಪಪಟ್ಟು ಅವರ ಚರಣಗಳಿಗೆರಗಿದರು. ಸುಖ ದುಃಖ ಮಾನಾಪಮಾನಗಳಲ್ಲಿ ಸಮಾನಬುದ್ಧಿಯುಳ್ಳ ಮತ್ತು ದ್ವೇಷರಹಿತವಾದ ಸಿದ್ಧ ಮಹಾತ್ಮರು, ಸರ್ವರ ಕೂಡೆ ಮೃದುಭಾಷಣ ಮಾಡುತ್ತಿದ್ದು, ಅವರೆಲ್ಲರ ಮನಸ್ಸಿಗೆ ಆನಂದವಾಗಿ ದರ್ಶನ ಮಾತ್ರದಿಂದ ಕೃತಕೃತ್ಯರೆನಿಸಿಕೊಂಡು ಹೋಗುತ್ತಿದ್ದರು. ಯಾವದೊಂದು

ಮನೆಯೊಳಗೆ ರೋಗಗ್ರಸ್ತರಿದ್ದರೆ, ಕೂಡಲೇ ಸಿದ್ಧರ ಚರಣಗಳ ಮೇಲೆ ಅವರನ್ನು ಹಾಕುತ್ತಿದ್ದರು. ತತ್ಕ್ಷಣವೇ ಅವರ ಪೀಡೆಗಳು ನಿವಾರಣೆಯಾಗುತ್ತಿದ್ದವು..

ಒಂದು ದಿನ ಮಹಾತ್ಮರು ಕೂಡುವ ಸ್ಥಾನದ ಮುಂದೆ, ಮೈದಾನಿನಲ್ಲಿ ಹದಿನೆಂಟು ಕುಲದವರೆಲ್ಲರೂ ಕೂಡಿ, ತಮ್ಮ ತಮ್ಮ ಕುಲ, ವರ್ಣಾದಿಗಳು ಶ್ರೇಷ್ಠವೆಂದು ವಿವಾದ ಮಾಡುತ್ತಿದ್ದರು. ಅವರೆಲ್ಲರೂ ಕಡೆಗೆ ಆ ವಾದವನ್ನು ಸಿದ್ಧರ ಮುಂದೆ ತರಲು, ಅವರನ್ನು ಕುರಿತು ಸಿದ್ಧರೆಂದದ್ದು - "ದೇವರು ಅನೇಕವಿಲ್ಲದ ಸರ್ವರಿಗೂ ಒಬ್ಬನೇ ಇರುವನು, ಆದರೆ ಅವನನ್ನು ಹೊಂದಲಿಕ್ಕೆ ಮಾರ್ಗಗಳು ಅನೇಕ ಇರುವುದು. ಒಂದು ಊರಿಗೆ ಹೋಗಲಿಕ್ಕೆ ಹೇಗೆ ಅನೇಕ ರಸ್ತೆಗಳಿರುವವೋ, ಹಾಗೆ ದೇವರು ಸ್ಥಾನಕ್ಕೆ ಮುಟ್ಟಬೇಕಾದರೆ ಅನೇಕ ಮತಗಳಿರುತ್ತವೆ. ದೇವರ ಕೃಪೆಯು ಸರ್ವ ಜೀವಿಗಳಿಗೆ ಸಾಧ್ಯವಿದೆ ಎಂಬುದು ನಿರ್ವಿವಾದವಿರುವದು', ಇದನ್ನು ಕೇಳಿದ ಕೂಡಲೇ ಅವರೆಲ್ಲರೂ ವಾದವನ್ನು ಬಿಟ್ಟು, ಸಿದ್ಧರಿಗೆ ನಮಸ್ಕರಿಸಿ ಅಲ್ಲಿಂದ ಹೋದರು. ಹೀಗೆ ಕೆಲವು ಕಾಲ

ವಿಜಾಪುರದಲ್ಲಿ ಕಳೆದು ಆ ಮೇಲೆ ಸಿದ್ಧ ಯತಿಗಳು ಪುನಃ ಸಂಚಾರಕ್ಕೆ ಹೊರಟರು. ಆಗ ಊರೊಳಗಿನ ಭಕ್ತ ಜನರೆಲ್ಲರೂ ಬಂದು ಸಿದ್ಧರನ್ನು ಕುರಿತು ಪ್ರಾರ್ಥಿಸುತ್ತಾರೆ. - 'ಸದ್ಗುರುನಾಥರೆ , ನೀವು ಇಲ್ಲಿಂದ ಹೋದ ಮೇಲೆ ನಮ್ಮನ್ನು ತಾರಣ ಮಾಡುವವರು ಮತ್ತ್ಯಾರೂ ಇಲ್ಲ. ನಿಮ್ಮ ದರ್ಶನವು ನಮಗೆ ನಿತ್ಯ ಆಗುತ್ತಿರುವಾಗ ನಾವು ಸಹಜವಾಗಿ ಧನ್ಯರಾಗುತ್ತಿದ್ದೆವು." ಈ ವಚನಗಳನ್ನು ಕೇಳಿ, ಸಿದ್ದ ಮಹಾತ್ಮರು ಅನುತ್ತಾರೆ - 'ಹೇ ಸದ್ಭಕ್ತರುಗಳಿರಾ ಕೇಳಿರಿ, ನೀವು ಈಗ ಜ್ಞಾನ ಬೀಜ ಮಾತ್ರ ತೆಗೆದುಕೊಂಡಿರುವಿರಿ. ಮುಂದೆ ಅದಕ್ಕೆ ಅಂಕುರ ಬರುವದು, ಹೃದಯವೆಂಬ ಹೊಲದಲ್ಲಿ ಹುಟ್ಟಿರುವ ಈ ಬೀಜದ ಅಂಕುರವನ್ನು ಸದ್ವರ್ತನದಿಂದ ರಕ್ಷಿಸಬೇಕು. ಭಕ್ತಿಯುಕ್ತ ಕರ್ಮಗಳಿಂದ ಪಾಲಿಸಬೇಕು, ಮತ್ತು ಆತ್ಮಧ್ಯಾನದಿಂದ ಪೋಷಿಸಬೇಕು. ಈ ಸಾಧನಗಳಿಂದ ಮುಂದೆ ನೀವು ನಿಶ್ಚಯವಾಗಿ ಉತ್ತಮ ಗತಿಯನ್ನು ಹೊಂದುವಿರಿ. ಅವುಗಳಿಂದ ನಿಮ್ಮ ಸಂಸಾರ ವಿಪತ್ತಿಯೂ ನಾಶವಾಗಿ ಬ್ರಹ್ಮಪ್ರಾಪ್ತಿಯು ಸುಲಭವಾಗುವದು. ಈಗ ಅನ್ಯಸ್ಥಾನಗಳಲ್ಲಿರುವ ಜೀವರು ನನ್ನ

ದಾರಿ ನೋಡುತ್ತಿಲಿದ್ದಾರೆ. ಅವರಿಗೆ ನನ್ನ ಬೋಧವನ್ನು ಕೊಡುವ ದಶೆಯಿಂದ ಆ ಜೀವರ ಕಡೆಗೆ ಈ ಶರೀರವು ಹೋಗುತ್ತದೆ. ಹ್ಯಾಗೆ ನೀವು ನನಗೆ ಉಪಚಾರಗಳನ್ನು ಮಾಡಿದಿರೋ ಹಾಗೆ ಇಲ್ಲಿಗೆ ಬರುವ ಸಾಧು ಸತ್ಪುರುಷರಿಗೆ ಮಾಡುತ್ತ ಇರಿ. ಅದರಿಂದ ನಿಮ್ಮ ಮನಸ್ಸಿಗೆ ಶಾಂತಿ ಪ್ರಾಪ್ತಿಯಾಗಲಿ ಸರ್ವ ರೀತಿಯಿಂದ

ನಿಮಗೆ ಕಲ್ಯಾಣವೇ ಆದೀತು', ಪ್ರೇಮಪೂರ್ವಕವಾದ ಈ ಅಮೃತಮಯ ಭಾಷಣವನ್ನು ಕೇಳಿ, ಸರ್ವರ ನೇತ್ರಗಳಿಂದ ಪ್ರೇಮಾಶ್ರುಗಳು ಇಳಿದವು ಮತ್ತು ಕಂಠವು ಸದ್ಗದಿತವಾಗಿ ಮಾತಾಡಲಾರದೆ ಹೋದರು. ದಯಾಭರಿತರಾದ ಸದ್ಗುರುನಾಥರು ಅವರ ಪ್ರೇಮಸ್ಥಿತಿಯನ್ನು ನೋಡಿ ಆಶ್ವಾಸನೆ ಕೊಟ್ಟು ಅನ್ನುತ್ತಾರೆ - 'ಸದ್ಭಕ್ತರೆ, ಕೆಲವು ಕಾಲದ ಮೇಲೆ ಇಲ್ಲಿ ಸಮೀಪದ ಒಂದು ಊರಿನಲ್ಲಿ ನಾನು ಸತ್ಯವಾಗಿ ವಾಸ ಮಾಡುವೆನು', ಹೀಗೆ ನುಡಿದು ಸದ್ಗುರುನಾಥರು, ದಕ್ಷಿಣ ದಿಕ್ಕಿಗೆ ನಡದರು. ಭಿಕ್ಷೆ ದಶೆಯಿಂದ ಮಾತ್ರ ಗ್ರಾಮದಲ್ಲಿ ಹೋಗುತ್ತಿದ್ದು, ಇತರ ಕಾಲವೆಲ್ಲ ಅರಣ್ಯಗಳಲ್ಲಿ ಕಳೆಯುತ್ತಿದ್ದರು . ಅಲ್ಲಿ ದನ

ಕಾಯುವವರ ಕೂಡ  ಆಡುತ್ತಿದ್ದು, ಹೀಗೆ ಜೀವನ್ಮುಕ್ತಿ ಸುಖದ ಸಲುವಾಗಿ ಜನಸಂಗವನ್ನು ಬಿಟ್ಟು ನಿಃಸಂಗರಾಗಿ ಸಂಚಾರ ಮಾಡುತ್ತಲಿದ್ದರು. ಹೇಗೆ ಸಂಚರಿಸುತ್ತಾ  ಸಿದ್ಧಾರೂಢರು ಸಿದ್ಧಾಪುರಕ್ಕೆ ಬರಲು ಅಲ್ಲಿ ಒಂದು ಚಮತ್ಕಾರವನ್ನು ನೋಡಿದರು. ಒಬ್ಬ ಜಂಗಮ ಹಠಯೋಗಿಯೂ  ಕೈಗಳನ್ನು ನೆಲಕ್ಕೆ ಹಚ್ಚಿ ಕಾಲುಗಳನ್ನು ಮೇಲೆ ಮಾಡಿ, ಗಜಂ ನಿಂತಿದ್ದನು. ಹೀಗೇಕೆಂದು ಸಿದ್ದರು ಆತನಿಗೆ ವಿಚಾರಿಸಲು, ಆತನು, "ನಾನು ಹೀಗೆ ಮಾಡುವದೇಕೆಂದರೆ - ಈ ಗ್ರಾಮದವರೆಲ್ಲರೂ ಕೂಡಿ ಸಹಸ್ರ ಜಂಗಮಾರ್ಚನೆ ಮಾಡಿದರೇನೆ  ನಾನು ಗಜಂ ಇಳಿಸುವೆನು. ಇಲ್ಲವಾದರೆ ಹೀಗೆ ಉಪವಾಸ ನಿಂತು ಬಿಡುವೆನು", ಈತನು ಜಂಗಮನಾಗಿ ನಮ್ಮ ಗ್ರಾಮದಲ್ಲಿ ಉಪವಾಸ ನಿಂತು ಇರುವಾಗ ನಾವು ಹ್ಯಾಗೆ ಊಟ ಮಾಡಬೇಕೆಂದು ಊರವರೆಲ್ಲರೂ ಊಟ ಮಾಡದೆ ಇರುತ್ತಿರಲು, ಬಹಳವಾಗಿ ತಳಮಳಿಸುತ್ತಿರುವ ಆ ಜನರನ್ನು ಕಂಡು, ಅವಧೂತರು, ಅವರನ್ನು ಕುರಿತು, "ಸದ್ಭಕ್ತರೇ, ನನ್ನ ವಚನವನ್ನು ಕೇಳಿರಿ. ನೀವು ಸಹಸ್ರ ಜಂಗಮಾರ್ಚನೆ

ಮಾಡಿಸುವೆವೆಂದು ಈ ಜಂಗಮನಿಗೆ ಹೇಳಿ ನಮಸ್ಕಾರ ಮಾಡಿರಿ. ನಾನು ಆತನಿಗೆ ಸಮಾಧಾನ ಮಾಡುತ್ತೇನೆ" ಎಂದು ಅಂದರು. ಇದನ್ನು ಕೇಳಿ ಗ್ರಾಮದ ಜನರು ಸಂತೋಷಯುಕ್ತರಾಗಿ ಸಹಸ್ರ ಜಂಗಮಾರ್ಚನೆ ಮಾಡಿಸುತ್ತೇವೆಂದು ಆ ಜಂಗಮನಿಗೆ ನಮಸ್ಕರಿಸಿದರು. ಆಗ ಆತನು ಗಜಂ ಇಳಿಸಿ ಕೂತನು. ಸಿದ್ದರು ಕೂಡಲೆ ಬಂದು ಅವರನ್ನು ಕುರಿತು, "ಜಗಭರಿತ ಜಂಗಮನಿರುವಾಗ ಯಾವ ಜಂಗಮನನ್ನು ಉಣಿಸುವಿ? ಜಂಗಮರೆಂತ ಕೆಲವರಿದ್ದಾರೆ ಅನ್ನುವಿಯಾದರೆ ಅಂಥವರು ಷಡೂರ್ಮಿ ಸಹಿತ ಇರುವರೊ ರಹಿತರಿರುವರೋ? ಷಡೂರ್ಮಿ ಸಹಿತ ಜಂಗಮರೆಂದರೆ, ಅವರು ಬದ್ಧರಿರುವದರಿಂದ ಪೂಜೆಗೆ ಅಯೋಗ್ಯರು. ಷಡೂರ್ಮಿ ರಹಿತರೆಂದ ಮೇಲೆ ನಿತ್ಯತೃಪ್ತರಾದ ಅಂಥವರಿಗೆ ನೈವೇದ್ಯವು ನಿಷ್ಪ್ರಯೋಜನವಾಗಿರುತ್ತದೆ' ಎಂದು ನುಡಿದ ಶಾಸ್ತ್ರೀಯ ಭಾಷಣವನ್ನು ಕೇಳಿದ ಕೂಡಲೇ ಆ ಜಂಗಮನು ನಿರುತ್ತರನಾದನು. ಆಮೇಲೆ ಏಕಾಂತದಲ್ಲಿ ಅವನನ್ನು ಕರಕೊಂಡು ಹೋಗಿ ಸಿದ್ಧರು, ಈ ಡಾಂಭಿಕ ವರ್ತನವನ್ನು

ಬಿಟ್ಟು ಬಿಡು. ಜನರಿಗೆ ಇದು ತಿಳಿಯತೆಂದರೆ, ನಿನಗೆ ಅಪಮಾನವಾಗುವದು", ಎಂದು ಅಂದದ್ದು ಕೇಳಿ, ಆತನು ಲಜ್ಜಿತನಾದನು. ಆಮೇಲೆ ಸಿದ್ದನಾಥರು, ಹಾಲು ಮತ್ತು ಸಕ್ಕರೆ ತರಿಸಿ ಆ ಜಂಗಮನಿಗೆ ಕೊಟ್ಟು, ಜನರನ್ನು ಕುರಿತು - 'ಜಂಗಮನು ಜಗದ್ಭರಿತನಿರುವನು. ಈ ಜಂಗಮನಿಗೆ ತೃಪ್ತಿ ಮಾಡುವುದರಿಂದ ಜಗತ್ತೆಲ್ಲ ತೃಪ್ತಿಯಾಯಿತೆಂದು ತಿಳಿಯಿರಿ. ಈಗ ನೀವು ನಿಶ್ಚಿಂತರಾಗಿ ನಿಮ್ಮ ಗೃಹಕೃತ್ಯದ ಕಾರ್ಯಗಳಿಗೆ ಉದ್ಯುಕ್ತರಾಗಿರಿ", ಎಂದು ನುಡಿಯಲು ಅವರೆಲ್ಲರೂ ಸದ್ಗುರುಗಳನ್ನು ಸ್ತುತಿಸುತ್ತ ಆನಂದದಿಂದ ಮನೆಗಳಿಗೆ ತೆರಳಿದರು. ಸಿದ್ದಯತೀಶ್ವರರು ಅಲ್ಲಿಂದ ಮುಂದೆ ಹೋಗುತ್ತಿರುವಾಗ ಯಾದವಾಡಕ್ಕೆ ಬಂದು, ಒಂದು ಮನೆಯ ಮುಂದೆ ಭಿಕ್ಷೆಗೆ ನಿಲ್ಲಲು ಒಬ್ಬ ಸ್ತ್ರೀಯಳು, ಅವರಿಗೆ ಒಂದು ರೊಟ್ಟಿ ಕೊಟ್ಟಳು. ಆ ರೊಟ್ಟಿಯ ಮೇಲೆ ಸ್ವಲ್ಪ ಪಲ್ಯವಿರಲು, "ರೊಟ್ಟಿತುಂಬ ಪಲ್ಯವಿಲ್ಲವಲ್ಲ" ಎಂದು ಮಹಾತ್ಮರು ನುಡಿದರು. ಆಗ ಆಕೆಯು ಅದೇ ಪಲ್ಯವನ್ನು ರೊಟ್ಟಿಯ ಮೇಲೆಲ್ಲ ಸವರಿಕೊಡಲು, ಸಿದ್ಧರು, 'ಈಗ ಮುರಿಯಲಿಕ್ಕೆ ರೊಟ್ಟಿ ಇಲ್ಲವಲ್ಲ'

ಅಂದರು. ಇದನ್ನು ಕೇಳಿ ಆಕೆಯು ನಗುತ್ತ ಈತನು ಹುಚ್ಚನಿದ್ದಾನೆಂದು ಒಳಗೆ ಹೋದಳು. ಈ ಪ್ರಕಾರ ಉನ್ಮತ್ತ ಚರ್ಯೆಯನ್ನು ತೋರಿಸುತ್ತ ಅವಧೂತರು ಸಂಚರಿಸುತ್ತಿದ್ದರು. ಹಾಗೆಯೇ ರೊಟ್ಟಿ ಕೈಯಲ್ಲಿ ಹಿಡ್ಕೊಂಡು ಸಿದ್ಧರು, ಅಲ್ಲಮಯ್ಯ ಎಂಬ ಪುರಾಣಿಕನು ತನ್ನ ಮನೆಯೊಳಗೆ ಪುರಾಣ ಹೇಳುತ್ತಿರುವದನ್ನು ನೋಡಿ, ಒಳನುಗ್ಗಿದರು. ಮಹಾತ್ಮರ ಈ ಉನ್ಮತ್ತ ಚರ್ಯೆಯನ್ನು ಕಂಡು, ಪುರಾಣಿಕನು ಅಲ್ಲಿದ್ದವರನ್ನು ಕುರಿತು, 'ಈ ಭವಿಯನ್ನು ಹೊರಗೆ ಹಾಕಿರಿ" ಎಂದೆನ್ನಲು, ಸಿದ್ಧರು ಬಲಾತ್ಕಾರದಿಂದ ಒಳಗೆ ಉಳಿದರು. ಆಗ ಪುರಾಣವು ಯಥಾರೀತಿ ನಡೆಯುತ್ತಿರುವಾಗ, ಆ ಚೆನ್ನಬಸವ ಪುರಾಣದೊಳಗಣ ಈಶ್ವರನ ಪಂಚವಿಂಶತಿ ಲೀಲೆಗಳ ಪೈಕಿ ಅಂಧಕಾಸುರಾರಿತ್ವವನ್ನು ಪುರಾಣಿಕನು ನಿರೂಪಿಸುತ್ತಿದ್ದನು. ಉಪಮಾಲಂಕಾರ ವರ್ಣಿಸುವಾಗ ಗಜದಂಥಾ ಆಮ್ರ ವೃಕ್ಷವಿದ್ದು, ಅದರ ಎದುರಿಗೆ ಶಂಕರನು ತಪಸ್ಸು ಮಾಡುತ್ತಿರುವಾಗ ವೃಕ್ಷದ ಮೇಲೆ ಮಧು ಮಿತ್ರವೆಂಬ ಎರಡು ಪಕ್ಷಿಗಳು ಪರಸ್ಪರ ಭಾಷಣ ಮಾಡುತ್ತಿದ್ದವವು. ಆಗ

ವಿದ್ಯುಲ್ಲತಾ ಎಂಬ ಶಬ್ದವು ಬರಲು, ಪುರಾಣಿಕನನ್ನು ಕುರಿತು, ಸಿದ್ಧರು, "ವಿದ್ಯುಲ್ಲತಾ" ಈ ಶಬ್ದಕ್ಕೆ ಸಂಬಂಧ ಯಾವುದು ವೃಕ್ಷವೋ ಗಜವೋ ಎಂದು ಕೇಳಲು, ಪುರಾಣಿಕನು ನಿರ್ಣಯ ಹೇಳಲಾರದೆ, ನಿರುತ್ತರನಾದನು. ಆಗ ಅವಧೂತರನ್ನುತ್ತಾರೆ, "ಆ ಶಬ್ದವು ವೃಕ್ಷಕ್ಕೆ ಸಂಬಂಧವಾಗಿದ್ದರೆ, ವೃಕ್ಷದ ಸ್ಥಾವರ ಸ್ಥಿತಿಯಿದ್ದು ಅದು ವಿರುದ್ಧವಾಗುವದು. ಗಜಕ್ಕೆ ಹ್ಯಾಗೆ ಸಂಬಂಧವಾಗುವದು ?" ಪುರಾಣಿಕನು ಈ ವಿವೇಚನವನ್ನು ಕೇಳಿ, ಈತನು ನಾನು ತಿಳಿದಂತೆ ಹುಚ್ಚ ಭವಿಯಲ್ಲ. ಈ ವ್ಯಕ್ತಿ ಬೇರಯಿದೆ, ಎಂದು ಚಿಂತಿಸುತ್ತ "ಮಹಾತ್ಮರೇ ನೀವೇ ಹೇಳಿರಿ' ಎಂದು ನುಡಿಯಲು ಸಿದ್ಧಗುರುಗಳು, ವಿದ್ಯುಲ್ಲತೆಯ ಉಪಮೆಯು ಎಲ್ಲಿ ಸಂಬಂಧ ಮಾಡಬೇಕೆಂದರೆ, ಪೀಪಿಲಿಕಾದಿ ಗಜಾಂತ ಚರದೇಹಗಳಲ್ಲಿ ಅವುಗಳ ಬುದ್ಧಿ ವೃತ್ತಿಯೆಂಬ ದರ್ಪಣದಲ್ಲಿ ಚಿದಾಭಾಸನು ಪ್ರತಿಬಿಂಬಿಸುತ್ತಾನೆ. ಈ ಚಿದಾಭಾಸನಿಗೆ ವಿದ್ಯುಲ್ಲತೆಯ ಉಪಮೆಯು ಸಲ್ಲುತ್ತದೆ. ಹ್ಯಾಗೆ ಕಗ್ಗತ್ತಲೆಯ ರಾತ್ರಿಯಲ್ಲಿ ಮೇಘಾಗ್ನಿಯೊಳಗೆ ವಿದ್ಯುಲ್ಲತೆ ಹೊರಟು ಕ್ಷಣದಲ್ಲಿ ಸರ್ವವಸ್ತುಗಳನ್ನು ಭಾಸಿಸಿ, ಕೂಡಲೇ ತನ್ನ

ಆಶ್ರಯವಾದ ಮೇಘದೊಳಗೆ ಐಕ್ಯವಾಗುವದೋ ಹಾಗೆಯೇ ಕೂಟಸ್ಥನ ಸನ್ನಿಧಿಯಲ್ಲಿ ಕಲ್ಪಿತ ಬುದ್ಧಿಯಲ್ಲಿ ಪ್ರತಿಬಿಂಬಿತವಾದ ಚಿದಾಭಾಸನು, ಸರ್ವ ತ್ರಿಪುಟಿಗಳನ್ನು ಭಾಸಿಸಿ, ಕ್ಷಣದಲ್ಲಿ ಸ್ವರೂಪದೊಳಗೆ ಐಕ್ಯನಾಗುವನು. ಆದ್ದರಿಂದ ಈ ಚಿದಾಭಾಸನೇ ವಿದ್ಯುಲ್ಲತೆಗೆ ಯೋಗ್ಯ ಉಪಮೇಯನಾಗುವನು' ಎಂದು ಹೇಳಿ, ಅವಧೂತರು ತಮ್ಮ ಕೈಯಲ್ಲಿದ್ದ ರೊಟ್ಟಿಯನ್ನು ಪುರಾಣದ ಮೇಲೆ ಇಟ್ಟು ಬಿಟ್ಟರು. ಪುರಾಣಿಕನು ಆ ರೊಟ್ಟಿಯನ್ನು ಕೈಯಲ್ಲಿ ತಕ್ಕೊಂಡು ಮಹಾ ಪ್ರಸಾದವೆಂದು ಮಸ್ತಕಕ್ಕೆ ಮುಟ್ಟಿಸಿದನು. ಮತ್ತು "ಪಾಪೋಹಂ ಪಾಪೋಹಂ' ಅನ್ನುತ್ತಾ ಸಿದ್ಧರಿಗೆ ನಮ್ರಭಾವದಿಂದ ನಮಸ್ಕಾರ ಮಾಡಿ ಸಿದ್ಧರನ್ನು ಕುರಿತು, "ನೀವು ಬ್ರಹ್ಮನಿಷ್ಠ ಸದ್ಗುರುಗಳಿರುವಿರಿ. ನಾನು ಕಾಶಿಗೆ ಹೋಗಬೇಕೆಂದು ನಿಶ್ಚಯಿಸಿದ್ದೇನೆ. ತಮ್ಮ ಆಜ್ಞೆಯಾಗಬೇಕು' ಎಂದು ಕೇಳಲು ಸಿದ್ಧಾರೂಢರು, "ಕಾಶಿಗೆ ಹೋದವರು ತಿರುಗಿ ಬರುವುದಿಲ್ಲ, ನೀನು ಅಲ್ಲಿಗೆ ಏಕೆ ಹೋಗುತ್ತಿ ?" ಎಂದು ಕೇಳಲು, "ನಾನು ಹೋಗವುದು ನಿಶ್ಚಯಿಸಿರುತ್ತೇನೆ" ಎಂದು ಅಲ್ಲಮಯ್ಯನು

ಅಂದನು. ಅದಕ್ಕೆ ಸಿದ್ಧಮುನಿಗಳು,"ಹಾಗಾದರೆ ಹೋಗು. ಅಲ್ಲಿಯೇ ನಿನಗೆ ಮೋಕ್ಷ ಸಿಗುವುದು" ಎಂದನ್ನಲು, ಇದೇ ಆಶೀರ್ವಾದವೆಂದು ಆ ಸದ್ಗುಣಶಾಲಿಯಾದ ಪುರಾಣಿಕರು ಕೆಲವು ದಿನಗಳಾದ ಮೇಲೆ ಕಾಶಿಯಾತ್ರೆಗೆ ಹೋದನು. ಆದರೆ ಕಾಕತಾಳೀಯ ನ್ಯಾಯದಂತೆ ಅವನು ಅಲ್ಲಿಯೇ ತೀರಿಕೊಂಡನು.

ಆಮೇಲೆ ಸಿದ್ಧಾರೂಢರು ಆ ಗ್ರಾಮವನ್ನು ಬಿಟ್ಟು ಕಿಲ್ಲೆಯೊಳಗಿಂದ ಹೊರಬೀಳುವಾಗ, ಮೂರು ಘಳಿಗೆ ರಾತ್ರಿಯಾಗಿದ್ದು ವಿಶೇಷ ಕತ್ತಲೆಯಾಗಿತ್ತು. ಅದೇ ಸಮಯದಲ್ಲಿ ಆ ಗ್ರಾಮದ ಫೌಜದಾರನು ಕೆಲವು ಸಿಪಾಯಿಯರನ್ನು ಕರೆದುಕೊಂಡು ಕಳ್ಳರ ತಪಾಸಣೆಗಾಗಿ ಮುಂದಿನಿಂದ ಬರುತ್ತಿದ್ದನು. ಆತನು ಸಿದ್ಧರನ್ನು ಕಂಡು, ಪ್ರಶ್ನೆ ಮಾಡಲು ಮಹನೀಯರು ಉತ್ತರ ಕೊಡಲಿಲ್ಲ, ಚೋರಾಕಾರವಾದ ಆ ಫೌಜದಾರನ ಮನಸ್ಸು ಕಂಡವರನ್ನೆಲ್ಲ ಕಳ್ಳರೆಂದು ಭಾವಿಸುತ್ತಿತ್ತು. ಹೀಗಾಗಿ ಆತನು.

ಸಿದ್ಧರನ್ನೂ ಕಳ್ಳನಂತೆ ಭಾವಿಸಿ, ಅವರನ್ನು ಹೊಡಿಯಿರೆಂದು ಸಿಪಾಯರಿಗೆ ಆಜ್ಞಾಪಿಸಲು, ಅವರು ಮಹಾತ್ಮರಿಗೆ ಯಥೇಷ್ಟ ಹೊಡೆದರು. ಆನಂತರ ಸಿದ್ಧರನ್ನು ಗ್ರಾಮದ ಹೊರಗೆ ಕಳುಹಿಸಲು ಸಿದ್ಧಯತಿಗಳು ಒಂದು ಗುಡಿಯೊಳಗೆ ಹೋಗಿ ಮಲಗಿಕೊಂಡರು. ಈ ವಾರ್ತೆಯು ಪುರಾಣಿಕರು ಕೇಳಿ, ಅವನು ಗುರುಗಳನ್ನು ಶೋಧಿಸುತ್ತಾ ಸಿದ್ಧರು ಮಲಗಿಕೊಂಡಿರುವ ಗುಡಿಗೆ ಬಂದನು. ನೋವಿನಿಂದಲೂ ಶ್ರಮದಿಂದಲೂ ಬಿದ್ದಿರುವ ಸದ್ಗುರುನಾಥರನ್ನು ಕಂಡು, ಮರಳಿ ಗ್ರಾಮಕ್ಕೆ ಬರಬೇಕೆಂದು ಪ್ರಾರ್ಥಿಸಲು ಸಿದ್ಧರು ಒಪ್ಪಿಕೊಳ್ಳದಿರಲು, ಆತನು ಗ್ರಾಮದೊಳಗಿಂದ ಮಹಾತ್ಮರಿಗೋಸ್ಕರ ನೈವೇದ್ಯವನ್ನು ತರಿಸಿದನು. ಅದನ್ನು ಅರ್ಪಿಸಿ, ಬಹು ಕನಿಕರದಿಂದ, “ಹೇ ಸಿದ್ಧ ಗುರುಗಳೆ, ನಿಮ್ಮನ್ನು ನೋಡಿ ನನ್ನ ಕಣ್ಣುಗಳಿಂದ ನೀರು ಸುರಿಯುತ್ತವೆ.

ದುರ್ಧರವಾದ ಪ್ರಾರಬ್ಧವು ನಿಮ್ಮನ್ನು ಕಾಡುವದು, ನಮ್ಮಿಂದ ನೋಡುವುದಾಗುವದಿಲ್ಲ". ಇದನ್ನು ಕೇಳಿ ಸದ್ಗುರುರಾಯರು,

ಹಿಂದಿನ ವೃತ್ತವನ್ನು ನೆನಪು ಮಾಡಿ, ಅದರ ಮುಂದೆ ಇದು ಏನೇನು ಅಲ್ಲ. ಅದೇನೆಂದರೆ ಬಳ್ಳಾರಿಯಲ್ಲಿ ರಸ್ತೆ ಮೇಲಿಂದ ಒಮ್ಮೆ, ಸಿದ್ಧರು ಹೋಗುತ್ತಿರುವಾಗ, ಅವರು ಒಬ್ಬರ ಮನೆ ಮುಂದೆ ನಿಂತರು. ಆಗ ದ್ವಾರಪಾಲಕನು ಬಂದು "ಬಾಬಾಜಿ, ನೀನು ಯಾರು ಇದ್ದಿ " ಎಂದು ಕೇಳಲು, ಮಹಾತ್ಮರು ಉತ್ತರ ಕೊಡಲಿಲ್ಲ. ಆಗ ಆತನು ಬಹಳ ಸಿಟ್ಟಿನಿಂದ, "ಮೊನ್ನೆ ಸಾವುಕಾರನ ಮನೆಗೆ ಕನ್ನಾ ಹಾಕಿದಿರಿ, ಈಗ ಪಾಳತಿ ನೋಡಲಿಕ್ಕೆ ಬಂದಿರುವಿ, ನನಗೆ

ಗೊತ್ತಾಯಿತು' ಎಂದು ನುಡಿದು, ಸಿದ್ಧರನ್ನು ಹಿಡಿದು ನೂಕಿದನು. ಆಗ ಸಿದ್ಧರು ಪಾವಟಣಿಗೆಯ ಕಲ್ಲ ಮೇಲೆ

ರಪ್ಪನೆ ಬಿದ್ದು ಮೊಣಕಾಲಿಗೆ ಘಾಯವಾಗಿ ರಕ್ತ ಬಂತು. ಈಗ ಸದ್ಗುರುಗಳು ಆ ಸಂಗತಿಯನ್ನು ನೆನಪು ಮಾಡಿ

ಈ ಗಾಯದ ಮೇಲೆ ಕೈ ಸವರುತ್ತಾ, "ನನಗೆ ಕಿಂಚಿತ್ತಾದರೂ ದುಃಖವಿಲ್ಲ. ನಿಸ್ಸಂಗವಾಗಿರುವಾಗ ಪ್ರಾಪ್ತವಾಗುವ ಸುಖವು ಜನಸಂಗದಲ್ಲಿ ಸಿಗಲಾರದು' ಎಂದು ಪುರಾಣಿಕನಿಗೆ